ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2459\2015\ಸನಿಕಾಸ-2
DRE-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 5.11.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಶ್ರೀ.ಎಂ.ಮದನಗೋಪಾಲ್, ನಿವೃತ್ತ, ಆರ್.ಟಿ.ಓ., ಸಾರಿಗೆ ಇಲಾಖೆ, ತುಮಕೂರು (2) ಶ್ರೀ.ಎಲ್.ಲಿಂಗರಾಜು, ಆರ್.ಟಿ.ಓ., ಸಾರಿಗೆ ಇಲಾಖೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ.ಸಿ.ಟಿ.ಮೂರ್ತಿ, ಆರ್.ಟಿ.ಓ., ರಾಜಾಜಿನಗರ ಬೆಂಗಳೂರು ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ.ಶಾಮಣ್ಣ, ಪಿ.ಬಿ. ನಂ:156, ಆಶೋಕನಗರ, ತುಮಕೂರು ಜಿಲ್ಲೆ ತುಮಕೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಎಂ.ಮದನಗೋಪಾಲ್, ನಿವೃತ್ತ, ಆರ್.ಟಿ.ಓ., ಸಾರಿಗೆ ಇಲಾಖೆ, ತುಮಕೂರು (2) ಶ್ರೀ.ಎಲ್.ಲಿಂಗರಾಜು, ಆರ್.ಟಿ.ಓ., ಸಾರಿಗೆ ಇಲಾಖೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ.ಸಿ.ಟಿ.ಮೂರ್ತಿ, ಆರ್.ಟಿ.ಓ., ರಾಜಾಜಿನಗರ ಬೆಂಗಳೂರು (ಇನ್ನು ಮುಂದೆ "ಎದುರುದಾರ 1, 2 ಮತ್ತು 3" ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ಅಧಿಕಾರ ದುರುಪಯೋಗ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು, ನೆಲಮಂಗಲ ಹಾಗೂ ರಾಜಾಜಿನಗರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ಕಛೇರಿಗಳ ಪಕ್ಕದಲ್ಲೇ ರಾಷ್ಟ್ರೀಯ ಹೆದ್ದಾರಿ ಇದ್ದು ಇಲ್ಲಿ ಖಾಸಗಿ ಬಸ್ ನವರಿಂದ ಅನಧಿಕೃತವಾಗಿ, ಅಕ್ರಮವಾಗಿ ಚಾಲನೆ ಮಾಡಲು ಲಂಚ ಪಡೆದು ಸಹಕರಿಸುತ್ತಿದ್ದಾರೆ. ಸುಮಾರು 2000ಕ್ಕೂ ಅಧಿಕ ಖಾಸಗಿ ಬಸ್‌ಗಳು ಪರವಾನಗೆ

ಪಡೆಯದೆ ಸಂಚರಿಸುತ್ತಿದ್ದು ಇದರಿಂದ ಮುಗ್ಧ ಪ್ರಯಾಣಿಕರು ಅಪಘಾತದಂತಹ ಅವಗಹಡುಗಳು ಸಂಭವಿಸಿದರೆ ಯಾವುದೇ ಇಮೇ ಸೌಲಭ್ಯಗಳು ದೊರಕದಂತಾಗಿ ನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅಲ್ಲದೆ ರಾಜ್ಯ ಸಾರಿಗೆ ಇಲಾಖೆಗೆ ಇದರಿಂದ ನಷ್ಟ ಉಂಟಾಗುತ್ತಿದ್ದೆ. ಆದ್ದರಿಂದ ಇದನ್ನು ತಡೆಗಟ್ಟಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದ್ದಾರೆ.

3. ಸದರಿ ದೂರಿನ ಮೇಲೆ 1ನೇ ಎದುರುದಾರರಿಂದ ಆಕ್ಷೇಪಣೆಯನ್ನು ಕೋರಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಎದುರುದಾರ-1 ರವರು ದೂರುದಾರರು ತಮ್ಮ ದೂರಿಗೆ ಅನುಸಾರವಾಗಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ, ಅನಧಿಕೃತವಾಗಿ ಚಲಿಸುವ ವಾಹನಗಳ ಪಟ್ಟಿಯನ್ನು ನೀಡಿರುವುದಿಲ್ಲ. ತಮ್ಮ ಕಛೇರಿಯಿಂದ 364 ವಾಹಗಳಿಗೆ ಯಾವುದೇ ಪರವಾನಗಿ ನೀಡಿರುವುದಿಲ್ಲ ಅದುಅಲ್ಲದೆ ತಾವು ಇತ್ತೀಚೆಗೆ ಈ ಹುದ್ದೆಯನ್ನು ವಹಿಸಿಕೊಂಡಿದ್ದು, ದೂರುದಾರರು ಆಪಾದಿಸಿರುವ ದೂರಿಗೆ ವಿವರವಾದ ಉತ್ತರ ನೀಡಲು 2 ತಿಂಗಳ ಕಾಲಾವಕಾಶವನ್ನು ಕೇಳಿಕೊಂಡಿದ್ದಾರೆ.

4. ಆಪ್ರಕಾರ ಎದುರುದಾರರ-1 ರವರು ದಿ: 20.11.2015ರಂದು ತಮ್ಮ ಆಕ್ಷೇಪಣೆಯಲ್ಲಿ ಎದುರುದಾರರು ಯಾವುದೇ ಸಂಪೂರ್ಣ ಮಾಹಿತಿ ಪಡೆಯದೆ ಸುಳ್ಳು ಫೀರ್ಯಾದಿ ದಾಖಲಿಸಿದ್ದಾರೆ. ಆದರೆ ತಮ್ಮ ಇಲಾಖೆ 2014-15ನೇ ಸಾಲಿನಲ್ಲಿ 24 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು, 2013-14ನೇ ಸಾಲಿನಲ್ಲಿ 54 ವಾಹನಗಳನ್ನು ತಪಾಸಣೆ ಮಾಡಲಾಗಿದೆ. ದಿ: 4.3.2014 ರಂದು ಆರ್.ಟಿ.ಓ., ತುಮಕೂರು ರವರು 18 ವಾಹನಗಳ ಪರವಾನಿಗೆಯನ್ನು ರದ್ದು ಗೊಳಿಸಿದ್ದಾರೆ. 49 ವಾಹನಗಳಿಗೆ ದಂಡವನ್ನು ವಿಧಿಸಲಾಗಿದೆ. ಅಲ್ಲದೆ ತಮ್ಮ ಇಲಾಖೆಯಲ್ಲಿ ಅನೇಕ ಹುದ್ದೆಗಳು ಕಾಲಿ ಇದ್ದು ಆರ್.ಟಿ.ಓ., ತುಮಕೂರು ರವರ ಅಡಿಯಲ್ಲಿ 11 ಜನ ಮೋಟರ್ ವಾಹನ ತಪಾಸಣಾಧಿಕಾರಿಗಳ ಬದಲಿಗೆ ಕೇವಲ 3 ಜನರು ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ.

ಅಲ್ಲದೆ ಅತಿದಟ್ಟನೆಯ ವಾಹನಗಳ ಸಂಚಾರವನ್ನು ಕೇವಲ ಕೆಲವೇ ಸಿಬ್ಬಂದಿಗಳಿಂದ ನಿರ್ವಹಿಸಲು ಅಸಾಧ್ಯವಾಗಿರುತ್ತದೆ. ಆದ್ದರಿಂದ ನಮ್ಮ ಕಛೇರಿಯ ಅಧಿಕಾರಿಗಳು ಯಾವುದೇ ಭ್ರಷ್ಟಾಚಾರದಲ್ಲಿ ತೊಡಗಿರುವುದಿಲ್ಲ. ಅನಧಿಕೃತ ವಾಹನಗಳ ಸಂಚಾರಕ್ಕೆ ಆಸ್ಪದ ಕೊಟ್ಟಿಲ್ಲವೆಂದು ತಿಳಿಸುತ್ತಾ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿಕೊಂಡಿದ್ದಾರೆ.

5. ಎದುರುದಾರ-2ರವರು ತಮ್ಮ ಆಕ್ಷೇಪಣೆಯಲ್ಲಿ ಯಾವುದೇ ಬಸ್‌ನ ರಹದಾರಿ ಪರವಾನಿಗೆ ನೀಡಲು, ಕ್ರಮ ಜರುಗಿಸಲು ತಮ್ಮ ಕಛೇರಿಗೆ ಅಧಿಕಾರ ಇರುವುದಿಲ್ಲ. ರಹದಾರಿ ಪರವಾನಿಗೆ ಮೇಲೆ ಕ್ರಮ ಜರುಗಿಸಲು ತುಮಕೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ವ್ಯಾಪ್ತಿಗೆ ಒಳಪಡುತ್ತದೆ. ತಮ್ಮ ಕಛೇರಿ ಮಾರ್ಗ ಮಧ್ಯದಲ್ಲಿ ಇರುವುದರಿಂದ ತಮಗೆ ಈ ಅಧಿಕಾರ ಇರುವುದಿಲ್ಲ. ತಾವು ಕಾಲಕಾಲಕ್ಕೆ ಬಸ್‌ನ ತನಿಖಾ ವರದಿಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಕ್ರಮ ಜರುಗಿಸಲು ಕಳುಹಿಸಲಾಗಿದೆ. ತಾವು ಪ್ರವರ್ತನ ಕಾರ್ಯಕ್ಕೆ ಹೆಚ್ಚು ಗಮನ ಕೊಡುವುದಾಗಿ ಕೇಳಿಕೊಂಡಿದ್ದಾರೆ.

6. ಎದುರುದಾರ-3 ರವರು ತಮ್ಮ ಆಕ್ಷೇಪಣೆಯಲ್ಲಿ 2ನೇ ಎದುರುದಾರರು ಯಾವ ತರಹದ ಕಾನೂನು ಉಲ್ಲಂಘನೆ ಮಾಡಿರುತ್ತಾರೆ ಎಂಬ ಬಗ್ಗೆ ದೂರಿನಲ್ಲಿ ಯಾವುದೇ ನಿರ್ದಿಷ್ಟ ಉಲ್ಲೇಖವಿರುವುದಿಲ್ಲ. ಆದಾಗ್ಯ 3ನೇ ಎದುರುದರರು ತಮ್ಮ ಕಾರ್ಯಾ ವ್ಯಾಪ್ತಿಯಲ್ಲಿ ನಿಯಮಾನುಸಾರ ಕಾರ್ಯನಿರ್ವಹಿಸಿದ್ದಾರೆ. ದೂರಿನಲ್ಲಿ ತಿಳಿಸಿರುವ ವಾಹನಗಳ ಪಟ್ಟಿಯನ್ನು ಪರಿಶೀಲಿಸಲಾಗಿ ಸದರಿ ಪಟ್ಟಿಯಲ್ಲಿರುವ ಖಾಸಗಿ ಬಸ್‌ಗಳು ಪರವಾನಗಿ ಇಲ್ಲದೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುತ್ತಿರುವ ಕುರಿತು ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸಲು ಎಲ್ಲಾ ಹಿರಿಯ ಮೋಟಾರ್ ವಾಹನ ನಿರೀಕ್ಷಕರಿಗೆ ದಿ: 30.9.2015 ರಂದು ಮೆಮೋ ನೀಡಲಾಗಿದೆ. ಪರವಾನಿಗೆ ಇಲ್ಲದೆ ಸಂಚರಿಸುತ್ತಿರುವ ವಾಹನಗಳ ತಪಾಸಣೆ ಮಾಡಿ ಕ್ರಮಕೈಗೊಳ್ಳಲು ದಿ: 2.11.2015 ರಂದು ಅಧಿಕೃತ ಜ್ಞಾಪನ ಪತ್ರ ಮೂಖಾಂತರ ಆದೇಶಿಸಿರುತ್ತಾರೆ. ಹಿರಿಯ ಮೋಟಾರು ವಾಹನ

ನಿರೀಕ್ಷಕರುಗಳು ಅನಧಿಕೃತವಾಗಿ ಸಂಚರಿಸುತ್ತಿರುವ ವಾಹನಗಳ ತನಿಖಾ ವರದಿಗಳನ್ನು ನೀಡಿ ವಾಹನಗಳನ್ನು ಜಪ್ತಿಗೊಳಿಸಿದ್ದಾರೆ. ಸದರಿ ವಾಹನಗಳ ವಿರುದ್ಧ ಕ್ರಮ ಕೈಗೊಂಡು ರಾಜಿ ದಂಡವನ್ನು ವಸೂಲಿ ಮಾಡಲಾಗಿದೆ. ಅಲ್ಲದೆ ಇಂತಹ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಕಳ್ಳಾಟಿಕೆಯಿಂದ ಸಂಚರಿಸುವ ವಾಹನಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ದಿನ ನಿತ್ಯ ಈ ರೀತಿ ನಿಯಮ ಉಲ್ಲಂಘಿಸಿದ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಅದು ದಿ: 3.11.2015 ರಂದು 300 ಹಾಗೂ 4.11.2015 ರಂದು 750 ಖಾಸಗಿ ಬಸ್‌ಗಳು ಸೇರಿದಂತೆ ವಿವಿಧ ವಾಹನಗಳನ್ನು ಜಪ್ತು ಮಾಡಲಾಗಿದೆ. ಆದ್ದರಿಂದ ದೂರಿನಲ್ಲಿ ಆಪಾದಿಸಿರುವ ಅಂಶಗಳ ಮೇಲೆ ಎದುರುದಾರರು ಮೊದಲೇ ಕ್ರಮ ಕೈಗೊಂಡಿರುವುದರಿಂದ ಈ ದೂರಿನಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. ಆದ್ದರಿಂದ ದೂರನ್ನು ವಜಾಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

7. ಎದುರುದಾರರು ನೀಡಿರುವ ಮಾಹಿತಿಗಳನ್ನು ಗಮನಿಸಿದಾಗ ತುಮಕೂರು ಹಾಗೂ ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿ–4ರಲ್ಲಿ ದಿನನಿತ್ಯ ಸುಮಾರು ವಾಹನಗಳು ಚಲಿಸುತ್ತವೆ ಅಂತ ಕಂಡುಬರುತ್ತದೆ. ಇಂತಹ ವಾಹನಗಳಲ್ಲಿ ಕೆಲವು ನೊಂದಣಿ ನವೀಕರಿಸದ, ಪರಿಮಿತಿಗಿಂತ ಹೆಚ್ಚು ಸರಕನ್ನು ಸಾಗಿಸುವುದು, ಪರಿಮಿತಿಯನ್ನು ಉಲ್ಲಂಘಿಸುವುದು, ಸಾರಿಗೆ ನಿಯಮಗಳನ್ನು ಉಲ್ಲಂಘಿಸುವುದು ಇತ್ಯಾದಿ ಕಂಡುಬರುತ್ತದೆ. ಇವುಗಳ ನಿಯಂತ್ರಣಕ್ಕೆ ಪ್ರಾದೇಶಿಕ ಸಾರಿಗೆ ಆಯುಕ್ತರು ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಅನೇಕ ಕ್ರಮಗಳನ್ನು ಕೈಗೊಂಡಿದ್ದಾಗಿ ಕೆಲವು ದಾಖಲೆಗಳ ಸಹಿತ ಮಾಹಿತ ನೀಡಿದ್ದಾರೆ. ಇಲ್ಲದೆ ಇನ್ನು ಪರಿಣಾಮಕಾರಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಸಾರಿಗೆ ಇಲಾಖೆ ಸಿಬ್ಬಂದಿಗಳ ಕೊರತೆ ಎದುರಿಸುತ್ತಿದೆ ಅಂತ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಅಂದರೆ ಇನ್ನು ಇಲಾಖೆಯಿಂದ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಹಾಗೂ ದಿನಾಲು ಎಷ್ಟೊ ವಾಹನಗಳು ಮೋಟಾರು ವಾಹನ ಕಾಯಿದೆಯ 1988ರ ನಿಯಮಗಳನ್ನು ಉಲ್ಲಂಘಿಸುತ್ತವೆ ಅಂತ ಕಂಡುಬರುತ್ತದೆ.

8. ದೂರುದಾರರ ಪ್ರಕಾರ ಎದುರುದಾರರು ಹಾಗೂ ಅವರ ಇಲಾಖೆ ಭ್ರಷ್ಟಾಚಾರದಲ್ಲಿ ತೊಡಗಿದ್ದರಿಂದ ಹಣದ ಆಮಿಶಕ್ಕೊಳಗಾಗಿ ಅಧಿಕಾರಿಗಳು ಕಂಡುಕಾಣದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಉದ್ದೇಶ ಪೂರ್ವಕವಾಗಿ ವರ್ತಿಸುತ್ತಿದ್ದಾರೆಂದು ಹೇಳಿದ್ದಾರೆ. ಸಾರಿಗೆ ಇಲಾಖೆ ಜನರ ಜೀವನಾಡಿಯಾಗಿದ್ದು ಇದರಿಂದ ಸರ್ಕಾರಕ್ಕೆ ದಿನಾಲು ಕೋಟ್ಯಾಂತರ ಆದಾಯ ಬರಬೇಕಾಗುತ್ತದೆ. ಆದರೆ ಅಧಿಕಾರಿಗಳು ಭ್ರಾಷ್ಟಾಚಾರದಲ್ಲಿ ತೊಡಗಿದ್ದರಿಂದ ನಿಗದಿತ ಆದಾಯ ಸರ್ಕಾರಕ್ಕೆ ಬರುವುದಿಲ್ಲವೆಂದು ಕಂಡುಬರುತ್ತದೆ. ಹೀಗಾಗಿ ಎದುರುದಾರರು ನೀಡಿದ ಅಂಕಿ ಸಂಖ್ಯೆಗಳು ಕೇವಲ ಸಾರ್ವಜನಿಕರಿಗೆ ತೋರಿಸಲು ನೀಡಿದ ನಾಮ ಮಾತ್ರ ಅಂಕಿ ಸಂಖ್ಯೆಗಳಾಗಿರುತ್ತದೆ. ಎದುರುದಾರರು ಯಾವುದೇ ಆಮಿಶಕ್ಕೊಳಗಾಗದೆ ಕರ್ತವ್ಯನಿರ್ವಹಿಸಿದರೆ ಇನ್ನು ಶೇ: 90 ರಷ್ಟು ಆದಾಯ ನಿರೀಕ್ಷಿಸಬಹುದಾಗಿದೆ.

9. ಆದ್ದರಿಂದ ಎದುರುದಾರರು ಹಾಗೂ ಸಾರಿಗೆ ಇಲಾಖೆ ಭ್ರಾಷ್ಟಾಚಾರ ರಹಿತವಾಗಿ ಕೆಲಸ ಮಾಡಲು ಹಾಗೂ ಸರ್ಕಾರಕ್ಕೆ ನಿಗಧಿತ ಆದಾಯ ಪಡೆಯಲು ಮತ್ತು ಸಾರ್ವಜನಿಕರು ಮೋಟಾರು ವಾಹನ ಕಾಯಿದೆ 1988ರಲ್ಲಿಯ ನಿಯಮಗಳನ್ನು ಉಲ್ಲಂಘಿಸಿದಂತೆ ನೋಡಿಕೊಳ್ಳಲು ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಡಿಯಲ್ಲಿ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

10. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 22/11/16.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**